ಮಾಲೀಕರುಗಳ ಸಭೆ ಕರೆಯಿರಿ ಎಂದು ಕೇಳಿದ್ದೆ. ಅದನ್ನು ತಾವು ಮಾಡಲಿಲ್ಲ. ಈ ಕೈಗಾರಿಕೆಗೆ ಫ್ರಾನ್ಸ್ ಮತ್ತು ಜಪಾನ್‌ನಿಂದ ಸುಮಾರು ಐನ್ನೂರೈವತ್ತು ಕೋಟಿ ರೂಪಾಯಿಗಳ ಯಂತ್ರೋಪಕರಣಗಳನ್ನು ಖರೀದಿ ಮಾಡಿದ್ದಾರೆ. ಯಂತ್ರೋಪಕರಣಗಳ ಖರೀದಿಯಲ್ಲಿ ಮಾರುಗೇಶನ್‌ರವರು, ಅಧಿಕಾರಿಗಳು ಸೇರಿ ಕೋಟ್ಯಾಂತರ ರೂಪಾಯಿ ಲೂಟಿ ಮಾಡಿದ್ದಾರೆ. In a highly modernised industry, mechanised industry, it is impossible. if it is mechanically viable. Misappropriation of the Capital must be probed.

ಶ್ರೀ ಜೆ. ಹೆಚ್. ಪಟೇಲ್.—ಸಿ. ಓ. ಡಿ. ಗೂ ಬೇಡ, ಸಿ. ಬಿ. ಐ ಗೂ ಬೇಡ. ಇರತಕ್ಕ ಲೆಕ್ಕ ಮೇಲೆ ಕಾಣುತ್ತಿದೆ, ಹೊಸದಾಗಿ ಹುಡುಕುವುದು ಏನೂ ಇಲ್ಲ. ಜಪಾನ್‌ನಿಂದ ಮೆಷಿನ್ ತಂದರು, ದುಡ್ಡು ತಿಂದರು ಅಂದರೆ ಆ ಬಗ್ಗೆ ನನಗೆ ಗೊತ್ತಿಲ್ಲ. ಆಗ ಪಡೆದಂಥ ವ್ಯವಹಾರಗಳು ಗೊತ್ತಿಲ್ಲ, ಅದು ನಮ್ಮ ಸರ್ಕಾರದ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಬೊಮ್ಮಾಯಿಯವರು ಕೈಗಾರಿಕಾ ಮಂತ್ರಿಗಳಾಗಿ ಇದ್ದರು ಅವರನ್ನು ಕೇಳಿ ತಪ್ಪಾಗಿ ಗೊತ್ತಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ಸರ್ಕಾರ ಎಂದರೆ ಹಿಂದೆ ಯಾರು ಇದ್ದರೂ ಈಗ ಇರುವವರು ಎಲ್ಲರೂ ಒಂದೇ ನನಗೆ ವಿಷಯ ಗೊತ್ತಿದೆ. ಹಾಗೆ ನೋಡಲಿಕ್ಕೆ ಹೋದರೆ ಹಿಂದೆ ಎಂ. ಎಸ್. ಕೃಷ್ಣ ಅವರು ಇದ್ದರು, ಅವರನ್ನು ಕರೆಯಿಸಬೇಕಾಗುತ್ತದೆ. ಆದ್ದರಿಂದ ಅದಕ್ಕೆ ಬಹಳ ಸಮಯ ಆಗುತ್ತದೆ, ಅದು ಬೇಡ ಈಗ ಇರುವ ಪರಿಸ್ಥಿತಿಯಲ್ಲಿ ಆ ಮಾಲೀಕರ ಧೋರಣೆಯಿಂದ ಬಹಳ ಕಷ್ಟ ವಾಗಿದೆ. ಈಗಲೂ ಪ್ರಯತ್ನ ಮಾಡುತ್ತಿದ್ದೇವೆ. ಐಡಿಬಿಐ ಸಹಾಯದಿಂದಾಗಲಿ, ಮಧುರಾ ಕೋಟ್ಸ್ ಅವರಿಂದಾಗಲಿ. ಬಿ. ಐ. ಎಫ್. ಆರ್ ತೀರ್ಮಾನದ ಮೇಲೆ ಆಗಲಿ ಅಥವಾ ಹೈಕೋರ್ಟ್ ಲಿಕ್ವಿಡೇಷನ್ ಪ್ರೊಸೀಡಿಂಗ್ಸ್ ಮೇಲೆ ಆಗಲಿ. ಮೊದಲು ಯಾವುದಾ ತೀರ್ಮಾನ ಆಗುತ್ತದೆ ಅದರ ಪ್ರಕಾರ ಮಾಡುತ್ತೇವೆ.

(ಳಳಜ) ಶ್ರೀ ಎ. ಕೃಷ್ಣಪ್ಪ.—ಸದಸ್ಯರು ಗೈರುಹಾಜರು.

ಮಿನಿ ಜಲವಿದ್ಯುತ್ ಯೋಜನೆಗಳು

೮೯(೨೩೧) ಶ್ರೀ ಜಿ.ಎಸ್. ಆಚಾರ್ (ಬೈಂದೂರ್).—ಮಾನ್ಯ ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ವಿದ್ಯುತ್ ಕೊರತೆಯನ್ನು ನೀಗಿಸಲು ಕಡಿಮೆ ವೆಚ್ಚದಲ್ಲಿ ಮಿನಿ ಜಲವಿದ್ಯುತ್ ಯೋಜನೆಗಳನ್ನು ಕಾರ್ಯಗತಗೊಳಿಸುವ ಯೋಜನೆ ಸರ್ಕಾರಕ್ಕಿದೆಯೇ :

ಆ) ಹಾಗಿದ್ದಲ್ಲಿ ಸದರಿ ಯೋಜನೆ ಬಗ್ಗೆ ಸಮೀಕ್ಷೆ ನಡೆದಿದೆಯೇ :

ಇ) ಆ ಪ್ರಕಾರ ಯೋಚಿತ ಸೂಚನೆಗಳಾವುವು :

ಈ) ಯಾವಾಗ ಕಾರ್ಯಾರಂಭ ಮಾಡಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ (ಭಾರಿ ಹಾಗೂ ಮಧ್ಯಮ ಕೈಗಾರಿಕೆಗಳು ಹಾಗೂ ವಿದ್ಯುತ್ ಮಂತ್ರಿಗಳು).—

ಅ) ಇದೆ.

ಆ) ನಡೆದಿದೆ.

ಇ) ಕ್ಯಾಪ್ಟೀವ್ ವಿದ್ಯುತ್ ಉತ್ಪಾದನೆಯಲ್ಲಿ ಖಾಸಗಿ ವಲಯ ಪಾಲುಗೊಳ್ಳುವಂತೆ ಅವಕಾಶ ನೀಡುವುದು ಸರ್ಕಾರದ ನೀತಿಯಾಗಿದೆ, ಅನುಬಂಧದಲ್ಲಿ ಸೂಚಿಸಿರುವ ೧೨ ಮಿನಿ ಹೈಡಲ್ ಯೋಜನೆಗಳನ್ನು ಖಾಸಗಿ ವಲಯಕ್ಕೆ ವಹಿಸಿಕೊಡಲಾಗಿದೆ.

ಈ) ಅನುಬಂಧದಲ್ಲಿ ಸೂಚಿಸಿರುವ ಕ್ರಮಾಂಕ ೨,೪,೫ ಮತ್ತು ೬ ಯೋಜನೆಗಳ ಕೆಲಸ ಪ್ರಗತಿಯಲ್ಲಿದೆ.

STATEMENT-1

LIST OF MINI/SMALL HYDRO ELECTRIC PROJECTS WHICH HAVE BEEN ENTRUSTED TO PRIVATE SECTOR

Sl. No.	Name of project	Name of private agency	Installed capacity Kw	Annual energy HU	Cost of project & lakhs	Remarks
1	Shivapur hydro electric project	M/s. Bharuka Power Corporation.	2×9000 =18000	114	1822	At 16th km of Tungabhadra left bank canal
2	Mallapura hydro electric project	M/s. M.S.R. Power Corporation.	2×4500 =9000	51	1187	At 25th km of TLBC
3	Maddur mini hydel scheme	M/s. Gammon India Ltd.	1×1500 =1500	6·58	239	At 44th km of Visveswaraiah Canal
4	Sirwar mini hydel scheme	M/s. Hutti Gold Mines Ltd.	1×1000=1000	5·31	244	At 175 km along TLBC
5	Ganakal mini hydel scheme		1×350=350	1·84	68.50	At 182 km along TLBC
6	Kalmala mini hydel scheme		1×400=400	1.87	78	At 189 km along TLBC

7	Shiva mini hydel scheme	M/s. Cauvery Papers Ltd.,	1×3000 =3000	22	366	At Shivasamudra Power channel
8	Brindavan hydel scheme	M/s. Graphite India Ltd.,	2×6000 =12000	70	1200	At head works of Krishnaraja sagar dam
9	Dhupdal mini hydel scheme	M/s. Gokak Mills Ltd.,	2×2000 =4000	20	500	At head works of Dhupdal weir on Ghataprabha LBC. dam.
10	Madhava Mantri anicut scheme	M/s. Energy development Private Ltd.	1×3500 =3500	-	-	D/s of KRS dam
11	Drop d/s of KRS dam		1×250=250	-	-	D/s of KRS dam
12	Vani vilas sugar mini hydel scheme	M/s. Bellary steel Alloys Ltd.,	2×2000 =4000	10.60	-	Near Hiriyur in Chitradurga District.

ಅಧ್ಯಕ್ಷರು.—ಶ್ರೀ ಜಿ. ಎಸ್. ಆಚಾರ್ ಅವರ ಪ್ರಶ್ನೆಯನ್ನು ಶ್ರೀ ಐ. ಬಿ. ಶಂಕರ್‌ರವರು ಕೇಳಬಹುದು.

ಶ್ರೀ ಐ.ಬಿ. ಶಂಕರ್.—ಕರಾವಳಿ ಪ್ರದೇಶದಲ್ಲಿ ಸರ್ವೆ ಆಗಿಲ್ಲ, ಅದರ ಬಗ್ಗೆ ಮಾನ್ಯ ಮಂತ್ರಿಗಳಲ್ಲಿ ಕೇಳಿ ಎಂದು ಮಾನ್ಯ ಸದಸ್ಯರು ಬರೆದುಕೊಟ್ಟು ಹೋಗಿದ್ದಾರೆ, ಅದರ ಬಗ್ಗೆ ಮಾನ್ಯ ಮಂತ್ರಿಗಳು ತಿಳಿಸಬೇಕು.

ಶ್ರೀ ಲಕ್ಷ್ಮೀನರಸಿಂಹಯ್ಯ.—ಈಗಾಗಲೇ ಸುಮಾರು ೭೫೦ ಜಾಗದಲ್ಲಿ ಮಿನಿ ಹೈಡಲ್ ಪ್ಲಾಂಟ್ ಸ್ಥಾಪನೆ ಮಾಡಬಹುದು, ೧೬೦ ಮೆಗಾವಾಟ್ ಉತ್ಪಾದನೆ ಮಾಡಬಹುದು ಎಂದು ಎಲ್ಲಾ ಕಡೆ ಸರ್ವೆ ನಡೆದಿದೆ. ಯಾವ ಜಾಗದಲ್ಲಿಯೂ ಸರ್ವೆ ನಡೆಯುದೇ ಇಲ್ಲ. ೧೨ ಜಾಗಗಳಲ್ಲಿ ಲೀಸ್‌ಹೋಡ್ ಮಾಡಿದ್ದೇವೆ. ನಾಲ್ಕು ಜಾಗಾಗಳಲ್ಲಿ ಸ್ವಲ್ಪ ಕೆಲಸ ನಡೆದಿದೆ. ಇದು ಹೊಸ ಕಾನ್‌ಸೆಪ್ಟ್, ಜನ ಮುಂದೆ ಬರತಕ್ಕದ್ದು ಅಷ್ಟು ಸುಲಭವಾಗಿ ಬರುತ್ತಿಲ್ಲ, ಎರಡುಕಡೆ ಪ್ರಾರಂಭವಾದರೆ ಬೇರೆ ಜನ ಅಷ್ಟೇ ಸುಲಭವಾಗಿ ಮುಂದೆ ಬರುತ್ತಾರೆ.

ಶ್ರೀ ಎಂ. ಎಸ್. ಕೃಷ್ಣನ್.—ತಾವು ಖಾಸಗಿಯವರಿಗೆ ಮಿನಿ ಹೈಡಲ್ ಪ್ರಾಜೆಕ್ಟ್‌ನ್ನು ಕೊಡ ಬೇಕೆಂದು ಮಾಡಿದ್ದೀವೆಂದು ತಾವು ಹೇಳಿದ್ದೀರಿ. ನೀವು ಇದುವರೆಗೆ ಎಷ್ಟು ಜನರಿಗೆ ಇದನ್ನು ವಹಿಸಿ ಕೊಟ್ಟಿದ್ದೀರಿ ? ಎಷ್ಟು ಜನರು ಇದನ್ನು ನಡೆಸುತ್ತಿದ್ದಾರೆ ? ಮುಂತ್ತು ಎಷ್ಟು ಜನರು ಇದನ್ನು ನಾವು ನಡೆಸುವುದಕ್ಕಾಗುವುದಿಲ್ಲವೆಂದು ತಿಳಿಸಿದ್ದಾರೆ ? ಸರ್ಕಾರ ಇದರ ಬಗ್ಗೆ ಏನು ಕ್ರಮ ಕೈಗೊಂಡಿದೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ನಾನು ಈಗಾಗಲೇ ಹೇಳಿದ್ದೇನೆ. ೧೨ ಜನ ಖಾಸಗೀಯವರಿಗೆ ಈ ಈ ಹೈಡಲ್ ಪ್ರಾಜಿಕ್ಟ್‌ಗಳನ್ನು ವಹಿಸಿಕೊಟ್ಟಿದ್ದೇವೆ. ಇವರ ಪೈಕಿ ೪ ಜನರು ಈಗಾಗಲೇ ಕೆಲಸವನ್ನು ಪ್ರಾರಂಭ ಮಾಡಿದ್ದಾರೆ. ಶಿವಪುರ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನು ನಾವು ಬರೂಕಾ ಪೆಪರ್ ಕಾರ್ಪೊರೇಷನ್‌ನವರಿಗೆ ಕೊಟ್ಟಿದ್ದೇವೆ. ಅವರು ಬಿ.ಹೆಚ್.ಇ.ಎಲ್.ನವರಲ್ಲಿ ಮೆಷಿನರಿಗೆ ಆರ್ಡರ್‌ನು ಕೊಟ್ಟಿದ್ದಾರೆ. ಮಲ್ಲಾಪುರ ಹೈಡಲ್ ಪ್ರಾಜೆಕ್ಟ್‌ನ್ನು ಎಂ.ಎಸ್.ಆರ್. ನವರಿಗೆ ಕೊಟ್ಟಿದ್ದೇವೆ. ಸಿವಿಲ್ ವರ್ಕ್ಸ್‌ನ್ನು ಕೆ.ಪಿ.ಸಿ.ನವರಿಗೆ ಕೊಟ್ಟಿದ್ದೇವೆ. ಕೆಲಸ ಪ್ರಾರಂಭ ಆಗಿದೆ. ಕಲಮಲ ಮಿನಿ ಹೈಡಲ್ ಸ್ಕೀಂನ್ನು ಹಟ್ಟಿ-ಗೋಲ್ಡ್ ಮೈನ್ಸ್‌ನವರಿಗೆ ಕೊಟ್ಟಿದ್ದೇವೆ. ಅಲ್ಲಿ ಕೆಲಸ ಪ್ರಾರಂಭವಾಗಿದೆ. ಇನ್ನು ಕೆಲವು ಕಡೆ ಕೆಲಸ ಪ್ರಾರಂಭವಾಗಿಲ್ಲ. ಕೆಲವುಕಡೆ ಕೆಲಸ ಪ್ರಾರಂಭವಾಗಿದೆ.

ಶ್ರೀ ಆರ್. ವೆಂಕಟರಾಮಯ್ಯ.—ಬೀದರ್ ಮತ್ತು ಕೋಲಾರದಲ್ಲಿ ಡೀಸೆಲ್ ಜನರೇಟಿಂಗ್ ಪ್ರಾಜೆಕ್ಟ್‌ಗಳನ್ನು ಮಾಡಬೇಕೆಂದು ಸರ್ಕಾರದ ಯೋಜನೆ ಇದೆ. ಅದರ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಆ ಕಡೆ ಡೀಸೆಲ್ ಜನರೇಟರ್‌ಗಳನ್ನು ಸ್ಥಾಪನೆ ಮಾಡಬೇಕೆಂದು ಉದ್ದೇಶವಿದೆ. ಕೇಂದ್ರ ಸರ್ಕಾರದಿಂದ ಕ್ಲಿಯರೆನ್ಸ್ ಸಿಕ್ಕಿದ್ದರೂ ಕೂಡ ಹಣವನ್ನು ಕೊಡತಕ್ಕ ವಿಚಾರದಲ್ಲಿ ಸ್ವಲ್ಪ ಡಿಸ್‌ಪ್ಯೂಟ್ ಇದೆ. ಇದನ್ನು ಇಷ್ಟರಲ್ಲಿಯೇ ಇತ್ಯರ್ಥ ಮಾಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ಕಡೆ ಜನರಿಗೆ ಬಹಳ ತೊಂದರೆಯಾಗುತ್ತಿದೆ. ಆದ್ದರಿಂದ ಬೇಗನೆ ಇದರ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಲಕ್ಷ್ಮೀನರಸಿಂಹಯ್ಯ.—ಒಂದೇ ಒಂದು ವಿಷಯದಲ್ಲಿ ಡಿಸ್‌ಪ್ಯೂಟ್ ಇದೆ. ಇನ್ನುಳಿದಿದ್ದರಲ್ಲಿ ಯಾವ ಡಿಸ್‌ಪ್ಯೂಟೂ ಇಲ್ಲ. ಇರತಕ್ಕ ಡಿಸ್‌ಪ್ಯೂಟನ್ನು ಆದಷ್ಟುಬೇಗ ಇತ್ಯರ್ಥಮಾಡುತ್ತೇವೆ.

ಚುಪ್ಪು, ೯೦ (೩೭೮), ೯೧ (೫೬೫), ೯೨ (೧೪೦)

(ಮಾನ್ಯ ಸದಸ್ಯರುಗಳು ಸದನದಲ್ಲಿ ಹಾಜರಿರಲಿಲ್ಲ)